




ಸ್ವಾಮೀಜಿಯವರು ತಮ್ಮ ಉಪನ್ಯಾಸಗಳಲ್ಲಿ ಭಾರತೀಯ ಧರ್ಮದ ಮಹತ್ವವನ್ನೂ ಸಾಂಸ್ಕೃತಿಕ ಪರಂಪರೆಯನ್ನೂ ವಿಶೇಷವಾಗಿ ಒತ್ತಿಹೇಳುತ್ತಿದ್ದರು. ಶತಶತಮಾನಗಳಿಂದ ಆಗಿಹೋದ ಅವತಾರಗಳು ಮತ್ತು ನಿರಂತರವಾದ ಸಾಧುಸಂತರ ಆಶೀರ್ವಾದಗಳಿಂದ ಪುನೀತವಾದ ಪವಿತ್ರ ನೆಲವಿದು ಎಂದು ಅವರು ಮತ್ತೆ ಮತ್ತೆ ಹೇಳುತ್ತಿದ್ದರು. ವೇದಾಂತದಲ್ಲಿನ ಲೋಕಕಲ್ಯಾಣ ಚಿಂತನೆಗಳನ್ನು ತಮ್ಮದೇ ಆದ ಧಾಟಿಯಿಂದ ವಿವರಿಸಿದರು. ಪ್ರಸ್ತುತ ತಾಂಡವಾಡುತ್ತಿದ್ದ ದುಷ್ಕೃತ್ಯಗಳನ್ನು ಖಂಡಿಸಿದರು, ನವಭಾರತದ ಅತ್ಯುತ್ತಮ ಚಿತ್ರವನ್ನು ಸ್ಪಷ್ಟಪಡಿಸುತ್ತ ಹೋದರು. ಸಣ್ಣ, ಪುಟ್ಟ ಕ್ಷುಲ್ಲಕ ವಿಚಾರಗಳು ಅದರ ಮುಂದೆ ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವಂತಾಯಿತು.

ನಂತರ ಸ್ವಾಮೀಜಿ ಚೆನ್ನೈನಿಂದ ಹಡಗಿನ ಮೂಲಕ ಕೊಲ್ಕತಾವನ್ನು ತಲುಪಿದರು. ಅಲ್ಲಿಯೂ ಸಹ ಅತ್ಯಂತ ವಿಜೃಂಭಣೆಯಿಂದ, ಸಾವಿರಾರು ಜನರು ಮೆರವಣಿಗೆಯಲ್ಲಿ ಅವರನ್ನು ಕರೆದೊಯ್ದರು. ಕುದುರೆಯನ್ನು ಬಿಡಿಸಿ, ಉತ್ಸಾಹಿ ತರುಣರು ಅವರಿದ್ದ ಗಾಡಿ ಎಳೆದರು. ಅಲಂಕೃತ ಸ್ವಾಗತಕಮಾನುಗಳು ಅವರಿಗೆ ಸ್ವಾಗತವನ್ನು ಬಯಸಿದವು. ಧಾರ್ಮಿಕ, ಭಕ್ತಿಗೀತೆಗಳ ಜೊತೆಗೆ ಜಯಘೋಷಣೆಯು ಮುಗಿಲು ಮುಟ್ಟುತ್ತಿದ್ದವು.



# ಶಾಂತಿ ಮತ್ತು ಸಾಮರಸ್ಯಕ್ಕಾಗಿ ಜಾಗತಿಕ ಸಮಾವೇಶ




ನವದೆಹಲಿಯ ರಾಮಕೃಷ್ಣ ಮಿಷನ್ ೨೦೧೨ ರ ಸೆಪ್ಟೆಂಬರ್ ೧೧ ಮತ್ತು ೧೨ ರಂದು **'ಶಾಂತಿ ಮತ್ತು ಸಾಮರಸ್ಯಕ್ಕಾಗಿ ಜಾಗತಿಕ ಸಮಾವೇಶ'** ಎಂಬ ಅಭೂತಪೂರ್ವ ಸಮ್ಮೇಳನವನ್ನು ಏರ್ಪಡಿಸಿತ್ತು. ಪ್ರಪಂಚದ ವಿವಿಧ ಕಡೆಗಳಿಂದ ಬಂದಿದ್ದ ಸುಮಾರು ೧, ೨೫೦ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. ಈ ಸಮ್ಮೇಳನವು ಶ್ರೀರಾಮಕೃಷ್ಣ ಮಂದಿರದಲ್ಲಿ ಜರುಗಿದ ಸರ್ವಧರ್ಮ ಪ್ರಾರ್ಥನಾ ಸಭೆಯೊಂದಿಗೆ ಆರಂಭಗೊಂಡಿತು. ಇದರಲ್ಲಿ ಬೌದ್ಧಗುರು ಪರಮಪೂಜ್ಯ ದಲೈಲಾಮಾ ಮತ್ತಿತರ ಧಾರ್ಮಿಕ ಮುಖಂಡರು ಪಾಲ್ಗೊಂಡಿದ್ದರು. ಪೂಜ್ಯ ದಲೈಲಾಮಾ ಅವರು ಆಶೀರ್ವಚನ ನೀಡಿದರು ಹಾಗೂ ಸ್ವಾಮಿ ವಿವೇಕಾನಂದರನ್ನು ಕುರಿತಾದ ಶಾಶ್ವತ ವಸ್ತುಪ್ರದರ್ಶನವನ್ನು ಉದ್ಘಾಟಿಸಿದರು.

ಉದ್ಘಾಟನಾ ಅಧಿವೇಶನದಲ್ಲಿ ಪೂಜ್ಯ ಸ್ವಾಮಿ ವಾಗೀಶಾನಂದಜಿ ಮಹಾರಾಜ್, ಡಾ. ಅಬ್ದುಲ್ ಕಲಾಂ ಮತ್ತು ಪೂಜ್ಯ ದಲೈಲಾಮಾ ಪ್ರೇರಣಾದಾಯಕ ಪ್ರವಚನಗಳನ್ನು ನೀಡಿದರು. ಮೊದಲನೆಯ ದಿವಸ ಅಂದರೆ ಸೆಪ್ಟೆಂಬರ್ ೧೧ ರಂದು, **'ಧಾರ್ಮಿಕ ದೃಷ್ಟಿಯಿಂದ ಶಾಂತಿ ಮತ್ತು ಸಾಮರಸ್ಯ'** – ಈ ವಿಷಯವಾಗಿ ಎರಡು ವಿಚಾರಗೋಷ್ಠಿಗಳು ನಡೆದವು. ವಿವಿಧ ಧರ್ಮಗಳಿಗೆ ಸೇರಿದ, ಬೇರೆ ಬೇರೆ ದೇಶಗಳಿಂದ ಬಂದಿದ್ದ ಪೂಜ್ಯರು, ಗಣ್ಯರು ಇವುಗಳಲ್ಲಿ ಪಾಲ್ಗೊಂಡಿದ್ದರು. ಸೆಪ್ಟೆಂಬರ್ ೧೨ ರಂದು ತೈವಾನ್ ದೇಶದ ಟೈಪೆ ಮತ್ತು ಅಮೆರಿಕದ ಲಾಸ್ ಏಂಜಲೀಸ್ ನಗರಗಳಲ್ಲಿರುವ **'ಶಾಂತಿ ವಸ್ತುಪ್ರದರ್ಶನ'** ಗಳ ಪ್ರತಿನಿಧಿಗಳು ಹೃದಯಂಗಮವಾದ ಪ್ರಸ್ತುತಿಗಳನ್ನು (Presentations) ಮಾಡಿದರು. ಇದಾದನಂತರ, ರಾಮಕೃಷ್ಣ ಮಹಾಸಂಘದ ಪ್ರಧಾನಕಾರ್ಯದರ್ಶಿಗಳಾದ ಪೂಜ್ಯ ಸ್ವಾಮಿ ಸುಹಿತಾನಂದಜಿ ಅವರು ಹೊಸದಾದ 3D ಸಭಾಂಗಣವನ್ನು ಉದ್ಘಾಟಿಸಿದರು ಮತ್ತು ಸ್ವಾಮಿ ವಿವೇಕಾನಂದರ ಬಗೆಗಿನ 3D ಆನಿಮೇಷನ್ ಚಲನಚಿತ್ರವನ್ನು ಬಿಡುಗಡೆ ಮಾಡಿದರು. ಈ 3D ಚಲನಚಿತ್ರವನ್ನು ಸ್ವಾಮಿ ವಿವೇಕಾನಂದರ ಫೋಟೋಗಳನ್ನು ಉಪಯೋಗಿಸಿಯೇ ತಯಾರು ಮಾಡಲಾಗಿದೆ ಎನ್ನುವುದು ವಿಶೇಷ. ಅನಂತರ **'ಶಾಂತಿ ಮತ್ತು ಸಾಮರಸ್ಯಕ್ಕೆ ರಾಮಕೃಷ್ಣ ಆಂದೋಲನದ ಕೊಡುಗೆ'** ಎಂಬ ವಿಷಯವಾಗಿ ವಿಚಾರಗೋಷ್ಠಿ ನಡೆಯಿತು, ಪೂಜ್ಯ ಸ್ವಾಮಿ ಗೌತಮಾನಂದಜಿ ಅವರು ಇದರ ಅಧ್ಯಕ್ಷತೆ ವಹಿಸಿದ್ದರು. ಸ್ವಿಟ್ಜರ್‌ಲ್ಯಾಂಡ್, ದಕ್ಷಿಣ ಆಫ್ರಿಕಾ, ಜಪಾನ್, ಸಿಂಗಪೂರ್, ಅಮೆರಿಕ ಮತ್ತು ಭಾರತದ ವಿವಿಧ ಕಡೆಗಳಿಂದ ಬಂದಿದ್ದ ಸ್ವಾಮಿಗಳು ತಮ್ಮ ಅಭಿಪ್ರಾಯಗಳನ್ನು ಪ್ರಸ್ತುತಪಡಿಸಿದರು. ಮುಂದಿನ ವಿಚಾರಗೋಷ್ಠಿಯು **'ಶಾಂತಿ ಮತ್ತು ಸಾಮರಸ್ಯಕ್ಕೆ ಸಂಗೀತದ ಕೊಡುಗೆ'** ಎಂಬ ವಿಷಯದ ಮೇಲೆ ನಡೆಯಿತು. ಪಾಶ್ಚಾತ್ಯ ಸಂಗೀತ, ಸೂಫಿ ಸಂಗೀತ, ಗುರುಬಾನಿ (ಸಿಖ್) ಸಂಗೀತ ಮತ್ತು ಹಿಂದೂಸ್ತಾನಿ ಸಂಗೀತ ಪ್ರಕಾರಗಳ ಪ್ರತಿನಿಧಿಗಳು, ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವುದರೊಂದಿಗೆ ವಿಷಯದ ಬಗ್ಗೆ ಭಾಷಣ ಮಾಡಿದರು. ಕಡೆಯ ಗೋಷ್ಠಿಯಲ್ಲಿ **'ಶಾಂತಿ ಮತ್ತು ಸಾಮರಸ್ಯಕ್ಕೆ ಕ್ರೀಡೆಯ ಕೊಡುಗೆ'** ಎಂಬ ವಿಚಾರವಾಗಿ ಪ್ರಖ್ಯಾತ ಕ್ರಿಕೆಟ್ ಆಟಗಾರರಾದ ಶ್ರೀ ಕಪಿಲ್ ದೇವ್ ಮತ್ತು ಶ್ರೀ ಕೃಷ್ಣಮಾಚಾರಿ ಶ್ರೀಕಾಂತ್ ಮಾತನಾಡಿದರು. ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಡಾ. ಕರಣ್ ಸಿಂಗ್ ವಹಿಸಿದ್ದರು. ಸ್ವಾಮಿ ಸ್ವಾತ್ಮಾರಾಮಾನಂದಜಿ ಅವರ ಗಾಯನದೊಂದಿಗೆ ಸಮ್ಮೇಳನ ಮುಕ್ತಾಯವಾಯಿತು. ಇಡೀ ಸಮ್ಮೇಳನವು ನವದೆಹಲಿ ರಾಮಕೃಷ್ಣ ಮಿಷನ್ನಿನ ಮುಖ್ಯಸ್ಥರಾದ ಸ್ವಾಮಿ ಶಾಂತಾತ್ಮಾನಂದಜಿ ಅವರ ಮಾರ್ಗದರ್ಶನದಲ್ಲಿ ವೈಭವೋಪೇತವಾಗಿ ಮತ್ತು ಅಚ್ಚುಕಟ್ಟಾಗಿ ನಡೆಯಿತು.

## ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ಆಟೋಚಾಲಕರಿಗಾಗಿ ಆಧ್ಯಾತ್ಮಿಕ ಶಿಬಿರ

ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ೨೦೧೨, ಸೆಪ್ಟೆಂಬರ್ ೯ ರಂದು ಆಟೋಚಾಲಕರಿಗಾಗಿ ವಿಶೇಷ ಆಧ್ಯಾತ್ಮಿಕ ಶಿಬಿರ ನಡೆಯಿತು. ೧೪೦ ಆಟೋಚಾಲಕರು ಭಾಗವಹಿಸಿದ್ದ ಈ ಕಾರ್ಯಕ್ರಮವು ಭಜನೆ, ಮಾರ್ಗದರ್ಶಿತ ಧ್ಯಾನದಿಂದ ಆರಂಭವಾಯಿತು. ಅನಂತರ ಪೂಜ್ಯ ಸ್ವಾಮಿ ಸುರೇಶಾನಂದಜಿ ಮತ್ತು ಪೂಜ್ಯ ಸ್ವಾಮಿ ಮುಕ್ತಿದಾನಂದಜಿ ಆಶೀರ್ವಚನ ನೀಡಿದರು. ಮೈಸೂರಿನ ಸಾರಿಗೆ ಅಧಿಕಾರಿಗಳಾದ ಅರುಣ ಕುಮಾರ ಸಿಂಗ್ ಮತ್ತು ನಿವೃತ್ತ ಸಾರಿಗೆ ಅಧಿಕಾರಿಗಳಾದ ಶ್ರೀ ಸೋಮಶೇಖರ್ ಅವರು ಭಾಷಣಗಳನ್ನು ಮಾಡಿದರು. ಇದೇ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರನ್ನು ಕುರಿತಾದ ಚಲನಚಿತ್ರ ಪ್ರದರ್ಶನವೂ ಜರುಗಿತು. ಮಧ್ಯಾಹ್ನ ಭೋಜನಪ್ರಸಾದದ ನಂತರ ಎಲ್ಲರಿಗೂ ವಸ್ತ್ರಗಳು ಮತ್ತು ಆಶ್ರಮದ ಪುಸ್ತಕಗಳನ್ನು ವಿತರಿಸಲಾಯಿತು.

